# ನಗರಸಭಾ ಕಾರ್ಯಾಲಯ, ಕೋಲಾರ

ಸಂಖ್ಯೆ:ನಸಕೋ/ಜೆಇಪಿಆರ್/ಟೆಂ.ಪ್ರ/108/2009-10 ದಿನಾಂಕ:29-09-2009

## ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಎರಡನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ 2009-10ನೇ ಸಾಲಿನ 12ನೇ ಹಣಕಾಸು ಯೋಜನೆಯ ಮುಕ್ತನಿಧಿಯಡಿಯಲ್ಲಿ ಮೊಹರಾದ ಟೆಂಡರನ್ನು ನಿಗಧಿತ ನಮೂನೆಯ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯ ಮೇಲೆ ಕೆಲಸದ ಹೆಸರನ್ನು ನಮೂದಿಸಲಾದ ಟೆಂಡರ್‌ನ್ನು ಪೌರಾಯುಕ್ತರು, ನಗರಸಭೆ ಕೋಲಾರ ರವರು ಆಹ್ವಾನಿಸಿದ್ದಾರೆ.

1. ಟೆಂಡರ್ ಫಾರಂ ಬೆಲೆ ರೂ.1000-00+12.5% ತೆರಿಗೆ
2. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 27.10.2009 ರ ಸಂಜೆ 5.00 ಗಂಟೆ ವರೆಗೆ.
3. ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 28.10.2009 ರ ಸಂಜೆ 5.00 ಗಂಟೆವರೆಗೆ.
4. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಕೇಂದ್ರ ಸ್ಥಾನಿಕ ಸಹಾಯಕರವರ ಕಛೇರಿಯಲ್ಲಿ ಇರಿಸಿರುವ ನಗರಸಭೆ ಕೋಲಾರದ ಟೆಂಡರ್ ಬಾಕ್ಸ್‌ನಲ್ಲಿ ಮೊಹರು ಮಾಡಿದ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 29.10.2009 ರ ಸಂಜೆ 5.00 ಗಂಟೆವರೆಗೆ, ಸಾಧ್ಯವಾದಲ್ಲಿ ಅದೇ ದಿನ ಅಥವಾ ಮರು ದಿನ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು.

| ಪ್ಯಾಕೇಜ್ ನಂ. | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ | ಕಾಲಾವಧಿ |
|---|---|---|---|---|---|
| 1 | 1) ಕೋಲಾರ ನಗರದ ಎಂ.ಜಿ.ರಸ್ತೆಯಲ್ಲಿರುವ ಗಾಂಧಿವನದ ಅಭಿವೃದ್ಧಿ ಕಾಮಗಾರಿ ಹಾಗೂ<br>2) ನಗರದ ಕ್ಲಾಕ್ ಟವರ್ ವೃತ್ತದ ರಸ್ತೆ ಅಭಿವೃದ್ಧಿ ಕಾಮಗಾರಿ | 5.00<br>4.48 | 9.48 | ರೂ. 24,500/- | 3 ತಿಂಗಳು |

## ಷರತ್ತುಗಳು

1. ಅರ್ಜಿಯನ್ನು ಗುತ್ತಿಗೆದಾರರು ನೋಂದಣಿ ಮಾಡಿರುವ ಸಂಖ್ಯೆ, ಪಾಸ್ ಪುಸ್ತಕದ ನಕಲನ್ನು ಅರ್ಜಿಯ ಜೊತೆಯಲ್ಲಿ ಲಗತ್ತಿಸುವುದು.
2. ಇ.ಎಂ.ಡಿ ಹಣವನ್ನು ನಗದಾಗಿ ಅಥವಾ ಡಿ.ಡಿ ರೂಪದಲ್ಲಿ ಪೌರಾಯುಕ್ತರು, ನಗರಸಭೆ ಕೋಲಾರ ಇವರಿಗೆ ಮೊಹರು ಮಾಡಿದ ಟೆಂಡರ್ ಜೊತೆಯಲ್ಲಿ ಸಲ್ಲಿಸುವುದು
3. ಟೆಂಡರ್ ನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರವು ಪೌರಾಯುಕ್ತರಿಗೆ ಇರುತ್ತದೆ.
4. ಕಾಮಗಾರಿಗಳಿಗೆ ಸಂಬಂಧಪಟ್ಟ ಗುತ್ತಿಗೆದಾರರು, 2 ವರ್ಷದ ಅವಧಿಗೆ ಕಾಮಗಾರಿ ನಿರ್ವಹಣೆಯನ್ನು ಸ್ವಂತ ಖರ್ಚಿನಿಂದ ಮಾಡುವ ಬಗ್ಗೆ ರೂ.100-00 ಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಪತ್ರ ಸಲ್ಲಿಸುವುದು.
5. ಅಂದಾಜು ಪಟ್ಟಿ ದರಗಳಿಗಿಂತ ಶೇಕಡವಾರು ಕಡಿಮೆ ದರವನ್ನು ನಮೂದಿಸುವವರು, ವ್ಯತ್ಯಾಸದ ಮೊತ್ತವನ್ನು ಡಿ.ಡಿ.ಮೂಲಕ ಟೆಂಡರ್ ಜೊತೆಯಲ್ಲೇ ಕಡ್ಡಾಯವಾಗಿ ಸಲ್ಲಿಸಬೇಕು.
6. ಕಾಮಗಾರಿಗಳ ಬಿಲ್ಲನ್ನು 3 ನೇ ವ್ಯಕ್ತಿ ತಪಾಸಣೆ ವರದಿಯ ನಂತರ ಪಾವತಿಸಲಾಗುವುದು.
7. ಯಾವುದೇ ಸಮಯದಲ್ಲಿ ನಗರಸಭೆ ನೀಡುವ ಸಲಹೆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ.
8. ಮೇಲ್ಕಂಡ ಕಾಮಗಾರಿಗಳನ್ನು ಈ ಕಛೇರಿಯ ಹಣಕಾಸು ಇಲಾಖೆ ಫಾರಂ ನಂ.KW-1 ಷರತ್ತುಗಳಿಗೆ ಒಳಪಟ್ಟಿರುತ್ತದೆ.
9. ಹೆಚ್ಚಿನ ಮಾಹಿತಿಗಾಗಿ www.kolarcity.gov.in ನಲ್ಲಿ ಸಂಪರ್ಕಿಸತಕ್ಕದ್ದು.

**ಸಹಿ/-**
**ಅಧ್ಯಕ್ಷರು**
**ನಗರಸಭೆ, ಕೋಲಾರ**

**ಸಹಿ/-**
**ಪೌರಾಯುಕ್ತರು**
**ನಗರಸಭೆ, ಕೋಲಾರ**

Created by trial version, http://www.pdf-convert.com